## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
## ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಳ್ತಂಗಡಿ.

## ಅಪರಾಧ ಪ್ರಕರಣ ಸಂಖ್ಯೆ: 983/2025

**ಚಾಸಾಃ** 1 **ಫ್ರಾಸಾಃ** 1

| | |
|---|---|
| ಹೆಸರು | : ಸದಾನಂದ |
| ತಂದೆಯ ಹೆಸರು | : ಬಾಬು |
| ಪ್ರಾಯ | : 40 ವರ್ಷ |
| ಉದ್ಯೋಗ | : ಕೂಲಿ ಕೆಲಸ |
| ವಾಸ | : ನಾಲ್ಕೂರು ಗ್ರಾಮ, ಬೆಳ್ತಂಗಡಿ ತಾಲೂಕು |

**ದಿನಾಂಕ 23.12.2025 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ. ರವರಿಂದಃ**

ಆರೋಪಿಯ ಪರಿಚಯ ಇರುವುದಿಲ್ಲ. ನಾನು ಯಾವುದೇ ಅಪಘಾತವನ್ನು ಕಣ್ಣಾರೆ ನೋಡಿರುವುದಿಲ್ಲ, ಅಪಘಾತ ಹೇಗೆ ನಡೆದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಯಾರ ತಪ್ಪಿನಿಂದ ಅಪಘಾತವಾಗಿರುತ್ತದೆಂದು ಗೊತ್ತಿರುವುದಿಲ್ಲ ಮತ್ತು ಅಪಘಾತದಿಂದ ಯಾರಿಗೆ ಏನಾಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಸ್ವಂತ ಕೆಲಸದ ನಿಮಿತ್ತ ವೇಣೂರು ಪೊಲೀಸ್ ಠಾಣೆಗೆ ಹೋಗಿದ್ದಾಗ ಪೊಲೀಸರು ಮೂರು ದಾಖಲೆಗಳಿಗೆ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಸದರಿ ದಾಖಲೆಗಳು ದೂರು, ತಕ್ಷೀರು ಸ್ಥಳದ ಮಹಜರ್ ಮತ್ತು ನಕ್ಷೆ ಆಗಿದ್ದು ಸಾಕ್ಷಿಯು ಅದರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದರಿಂದ ದಾಖಲೆಗಳನ್ನು ನಿಪಿ-1 ರಿಂದ 3 ಎಂದು ಸಾಕ್ಷಿಯ ಸಹಿಗಳನ್ನು ನಿಪಿ-1(ಎ), 2(ಎ) ಮತ್ತು 3(ಎ) ಎಂದು ಗುರುತಿಸಲಾಯಿತು. ನಿಪಿ-1 ರಿಂದ 3 ರಲ್ಲಿ ಬರೆದಿರುವ ಅಂಶಗಳು ನನಗೆ ತಿಳಿದಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿರುವುದಿಲ್ಲ ಹಾಗೂ ಏನನ್ನೂ ವಶಪಡಿಸಿಕೊಂಡಿರುವುದಿಲ್ಲ.

***(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕಾಗಿ ಕೋರಿದಂತೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)***

**ಪಾಟೀ ಸವಾಲುಃ ಮಾನ್ಯ ಸ. ಸ. ಅ. ರವರಿಂದಃ**

ದಿಃ 21.4.2025 ರಂದು ರಾತ್ರಿ ವೇಣೂರು ಮಹಾಲಿಂಗೇಶ್ವರ ಜಾತ್ರಾ ಪ್ರಯುಕ್ತ ನನ್ನ ಬಾಬ್ತು ಬೈಕಿನಲ್ಲಿ ಮನೆಯಿಂದ ರಾತ್ರಿ ಸುಮಾರು 9.30 ಗಂಟೆಗೆ ಹೊರಟು ಅಳದಂಗಡಿ-ಗೋಳಿಯಂಗಡಿ ಸಾರ್ವಜನಿಕ ರಸ್ತೆಯಲ್ಲಿ ಬರುತ್ತಾ ಬೆಳ್ತಂಗಡಿ ತಾಲೂಕು ನಾಲ್ಕೂರು ಗ್ರಾಮದ ಡೆಪ್ಪುನಿ ಕಲ್ಲಚಡವು ಎಂಬಲ್ಲಿಗೆ ತಲುಪುವಾಗೆ ತಿರುವು ಹಾಗೂ ಸ್ವಲ್ಪ ಇಳಿಜಾರು ರಸ್ತೆಯಲ್ಲಿ ನನ್ನ ಎದುರಿನಿಂದ ಅಂದರೆ ಅಳದಂಗಡಿ ಕಡೆಯಿಂದ ಒಂದು ಬೈಕನ್ನು ಅದರ ಸವಾರ ದುಡುಕುತನ ಹಾಗೂ ನಿರ್ಲಕ್ಷತನದಿಂದ ಚಲಾಯಿಸಿದ ಪರಿಣಾಮ ಆತನ ಚಾಲನಾ ಹತೋಟಿ ತಪ್ಪಿ ಬೈಕ್ ಸ್ಕಿಡ್ ಆಗಿ ಬಿತ್ತು ಎಂದರೆ ಸರಿಯಲ್ಲ. ಕೂಡಲೇ ಸ್ವಲ್ಪ ದೂರದಿಂದ ಅಪಘಾತವನ್ನು ಕಂಡ ನಾನು ನನ್ನ ಬೈಕ್ ನಿಲ್ಲಿಸಿ ಹತ್ತಿರ ಹೋಗಿ ನೋಡಲಾಗಿ ಬೈಕಿನಲ್ಲಿ ಸವಾರ ಹಾಗೂ ಸಹಸವಾರಿಣಿ ಇದ್ದು ಇಬ್ಬರು ಬೈಕ್ ನೊಂದಿಗೆ ರಸ್ತೆ ಬಿದ್ದರು ಎಂದರೆ ಸರಿಯಲ್ಲ. ಅಷ್ಟರಲ್ಲಿ ಅದೆ ರಸ್ತೆಯಲ್ಲಿ ಓಡಾಡುವ ವಾಹನಗಳಲ್ಲಿ ಬಂದ ಇತರ ಸಾರ್ವಜನಿಕರು ಕೂಡ ಸೇರಿದರು ಎಂದರೆ ಸರಿಯಲ್ಲ. ಅವರೊಂದಿಗೆ ನಾನು ಸೇರಿ ಬೈಕ್ ಸವಾರ ಆರೋಪಿ ಹಾಗೂ ಸಹಸವಾರಿಣಿಯನ್ನು ಎತ್ತಿ ಉಪಚರಿಸಿ ನೋಡಲಾಗಿ ಆರೋಪಿಗೆ ಬಲಗೈಗೆ, ಬಲಕಾಲಿಗೆ, ಎಡಕೈ ಬೆರಳುಗಳಿಗೆ ತರಚಿದ ಹಾಗೂ ರಕ್ತಗಾಯವಾಗಿದ್ದು ಸಹಸವಾರಿಣಿಯವರಿಗೆ ತಲೆಗೆ ರಕ್ತಗಾಯವಾಗಿ ಪ್ರಜ್ಞಾಹೀನರಾಗಿದ್ದರು ಎಂದರೆ ಸರಿಯಲ್ಲ. ಕೂಡಲೆ ಅಲ್ಲಿ ಸೇರಿದ ಸಾರ್ವಜನಿಕರು ಆಂಬ್ಯುಲೆನ್ಸ್ ವಾಹನಕ್ಕೆ ಕರೆ ಮಾಡಿದ್ದರು ಎಂದರೆ ಸರಿಯಲ್ಲ. ಗಾಯಾಳುಗಳ ಹೆಸರು ವಿಚಾರಿಸಿ ತಿಳಿಯಲಾಗಿ ಬೈಕ್ ಸವಾರ ಆರೋಪಿಯ ಹೆಸರು ಹರೀಶ್ ಪೂಜಾರಿ ಎಂತಲೂ, ಸಹಸವಾರಿಣಿ ಹರೀಶ್ ರವರ ಹೆಂಡತಿ ಶ್ರೀಮತಿ. ಪ್ರತಿಮಾ ಎಂದು ತಿಳಿಯಿತು ಎಂದರೆ ಸರಿಯಲ್ಲ. ಸ್ವಲ್ಪ ಹೊತ್ತಿನಲ್ಲಿ ಅಲ್ಲಿ ಸೇರಿದ ಸಾರ್ವಜನಿಕರು ನೀಡಿದ ಮಾಹಿತಿ ಮೇರೆಗೆ ಬೈಕ್ ಸವಾರರ ಸಂಬಂಧಿಕರು ಕೂಡ ಬಂದಿದ್ದು, ಅವರುಗಳು ಸೇರಿ ಎಂದು ಆಂಬ್ಯುಲೆನ್ಸ್ ವಾಹನದಲ್ಲಿ ಗಾಯಾಳುಗಳಿಬ್ಬರನ್ನು ಚಿಕಿತ್ಸೆಯ ಬಗ್ಗೆ ಬೆಳ್ತಂಗಡಿ ಕಡೆಗೆ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ಈ ಅಪಘಾತ ಉಂಟಾದಾಗ ರಾತ್ರಿ ಸುಮಾರು 9.45 ಗಂಟೆ ಆಗಿರಬಹುದು ಎಂದರೆ ಸರಿಯಲ್ಲ. ಅಪಘಾತಕ್ಕೊಳಪಟ್ಟ ಬೈಕ್ ನಂಬರ್ ನೋಡಲಾಗಿ ಕೆಎ-21-ವಿ-2893 ಆಗಿರುತ್ತದೆ ಎಂದರೆ ಸರಿಯಲ್ಲ. ನಂತರ ತಿಳಿಯಲಾಗಿ ಗಾಯಾಳುಗಳ ಪೈಕಿ ಆರೋಪಿ ಹರೀಶ್ ರವರು ಬೆಳ್ತಂಗಡಿ ಅಭಯ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದು ಅವರ ಹೆಂಡತಿ ಶ್ರೀಮತಿ. ಪ್ರತಿಮಾ ರವರು ಬೆಳ್ತಂಗಡಿ ಸರ್ಕಾರಿ ಆಸ್ಪತ್ರೆಗೆ ಸಾಗಿಸುವಾಗ್ಗೆ ಮೃತಪಟ್ಟ ವಿಚಾರ ತಿಳಿಯಿತು ಎಂದರೆ ಸರಿಯಲ್ಲ. ಈ ಅಪಘಾತವನ್ನು ನನ್ನ ಬಾಬ್ತು ಹೆಡ್ ಲೈಟ್

ಬೆಳಕಿನಲ್ಲಿ ನೋಡಿರುತ್ತೇನೆ ಎಂದರೆ ಸರಿಯಲ್ಲ. ಈಗ ಮೇಲೆ ಓದಿ ಹೇಳಿದಂತೆ ನಾನು ನಿಪಿ–1 ರಂತೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

2. ದೂರಿನ ಅನ್ವಯ ದಿಃ 22.4.2025 ರಂದು ನಾನು ಘಟನಾ ಸ್ಥಳ ತೋರಿಸಿಕೊಟ್ಟಂತೆ ಬೆಳ್ತಂಗಡಿ ತಾಲೂಕು ನಾಲ್ಕೂರು ಗ್ರಾಮದ ಕಲ್ಲಚಡವು ದೆಪ್ಪುನಿ ಎಂಬಲ್ಲಿ ಅಳದಂಗಡಿ–ಗೋಳಿಯಂಗಡಿ ವೇಣೂರು ಸಾರ್ವಜನಿಕ ರಸ್ತೆಯ ಬದಿ ಚಾಸಾ7 ಮತ್ತು 8 ರವರ ಸಮಕ್ಷಮ ಸಂಜೆ 5.45 ಗಂಟೆಯಿಂದ 6.20 ಗಂಟೆಯವರೆಗೆ ತಕ್ಷೀರು ಸ್ಥಳದಲ್ಲಿ ಮಹಜರ್ ಜರುಗಿಸಿ ಸ್ಥಳದಲ್ಲಿ ಅಪಘಾಕ್ಕೊಳಪಟ್ಟ ಕೆಎ–21–ವಿ–2893 ಹೀರೋ ಕಂಪನಿಯ ಪಾಶನ್ ಪ್ರೋ ಬೈಕನ್ನು ಸ್ವಾಧೀನಪಡಿಸಿಕೊಂಡು ಸ್ಥಳದಲ್ಲಿ ನಿಪಿ–3 ರಂತೆ ನಕ್ಷೆ ತಯಾರಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಸ್ಥಳದಲ್ಲಿ ಹಾಜರಿದ್ದು ನಿಪಿ–2 ಮತ್ತು 3 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯವಾಗಲಿ ಎಂದು ನಾನು ಅವರೊಂದಿಗೆ ರಾಜಿ ಮಾಡಿಕೊಂಡು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ ದಂ.ಗಳು ಬೆಳ್ತಂಗಡಿ.

(ಸಾ. ಓ. ಹೇ. ಕೇ. ಸ. ಇ. ಎ. ಒ.)